**ಸಾಕ್ಷಿಯನ್ನು ದಿನಾಂಕಃ16.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ವಕೀಲರಿಂದಃ**

1. ನಾನು ಎಸ್ ಎಸ್ ಎಲ್ ಸಿ ಓದಿದ್ದೇನೆ. ಈ ದಾವೆಯನ್ನು ವಾದಿಯು ಏಕೆ ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ದಾವೆಯನ್ನು ಒಟ್ಟು 3 ಸರ್ವೆ ನಂಬರ್ ಗಳಿಗೆ ಹಾಕಿದ್ದಾರೆ. ನಾವು ಒಟ್ಟು 4 ಜನ ಅಣ್ಣ ತಮ್ಮಂದಿರು. ನಾವು ನಮ್ಮ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದೇವೆ. ನಾವು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಅದರ ಪ್ರಕಾರ ನಾವು ಪ್ರತ್ಯೇಕ ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದರೆ ಸರಿ. ಆರ್ ಟಿ ಸಿ ಗಳು ಇನ್ನೂ ಬೇರೆ ಬೇರೆಯಾಗಿಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂಬರ್ 1 ರಲ್ಲಿ ವಾದಿಗೆ 1 ಎಕರೆ 20 ಗುಂಟೆ ಬಂದಿದೆ ಎಂದರೆ 1 ಎಕರೆ 19 ಗುಂಟೆ ಬಂದಿದೆ. ಆ ಸರ್ವೆ ನಂಬರ್ ನಲ್ಲಿ ನನಗೆ ಜಮೀನು ಬಂದಿಲ್ಲ. ಆ ಜಮೀನಿನ ಮೇಲೆ ನಾನು ಸೊಸೈಟಿಯಲ್ಲಿ ಸಾಲ ತೆಗೆದುಕೊಂಡಿದ್ದೇನೆ ಎಂದರೆ ಮೊದಲಿನಿಂದಲೂ ತೆಗೆದುಕೊಳ್ಳುತ್ತಿದ್ದೆ, ಈಗಲೂ ತೆಗೆದುಕೊಳ್ಳುತ್ತಿದ್ದೇನೆ. ವಾದಿಯ ಗಂಡನ ಭಾಗಕ್ಕೆ ಹೋಗಿದ್ದ ಆಸ್ತಿಯ ಆರ್ ಟಿ ಸಿ ಯನ್ನು ನನ್ನ ಹೆಸರಿಗೆ ಅಕ್ರಮವಾಗಿ ಮಾಡಿಸಿಕೊಂಡಿದ್ದೇನೆ ಎಂದರೆ, ನನ್ನ ತಂದೆ ಮೃತ ಪಟ್ಟ ನಂತರ ನನ್ನ ಹೆಸರಿಗೆ ಖಾತೆ ಆಗಿತ್ತು. ಅಕ್ರಮವಾಗಿ ಖಾತೆ ಮಾಡಿಸಿಕೊಂಡು ವಾದಿಗೆ ಮೋಸ ಮಾಡಲು ಸೊಸೈಟಿಯಲ್ಲಿ ಆ ಆಸ್ತಿಯ ಮೇಲೆ ಸಾಲ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಸೊಸೈಟಿಯ ಕಾರ್ಯದರ್ಶಿಯವರಿಗೆ ಯಾವುದೇ ಸಾಲ ಕೊಡಬಾರದು ಎಂದು ಪತ್ರ ಕೊಟ್ಟಿದ್ದರೂ ಸಹ ನಾನು ಕಾರ್ಯದರ್ಶಿಯೊಂದಿಗೆ ಷರೀಕಾಗಿ

ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಸಾಲವನ್ನು ತೀರಿಸಿಲ್ಲ. ಆ ಆಸ್ತಿಯ ಮೇಲೆ ನನಗೆ ಹಕ್ಕು ಇಲ್ಲದೇ ಇದ್ದರೂ ನಾನು ಹೇಗೆ ಸಾಲ ತೆಗೆದುಕೊಳ್ಳುತ್ತಿದ್ದೇನೆ ಎಂದರೆ, ನಾನು ಮೊದಲಿನಿಂದಲೂ ಆ ಜಮೀನು ಮತ್ತು ನನ್ನ ಜಮೀನುಗಳನ್ನು ಸೇರಿಸಿ ಸಾಲ ತೆಗೆದುಕೊಳ್ಳುತ್ತಿದ್ದೆ. ದಾವಾ ಷೆಡ್ಯೂಲ್ ಐಟಂ ನಂಬರ್ 1 ರ ಆಸ್ತಿ ನನ್ನ ಹೆಸರಿಗೆ ಆರ್ ಟಿ ಸಿ ಇದೆ ಎಂದರೆ ಸರಿ. ಆರ್ ಟಿ ಸಿ ಯನ್ನು ವಾದಿಯ ಹೆಸರಿಗೆ ಮಾಡಿಸಿಕೊಡದೇ ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಸಾಲ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

2. ವಾದಿಯ ಗಂಡ ಜೀವಂತ ಇದ್ದಾಗ ದಿಃ 30.03.2019 ರಂದು ನನ್ನ ಮತ್ತು ನನ್ನ ಹೆಂಡತಿಯ ವಿರುದ್ಧ ಪೋಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂಬರ್ 5 ರ ಮನೆಯ ಪೂರ್ವದ ಅರ್ಧ ಭಾಗ ವಾದಿಯ ಗಂಡನಿಗೆ ಬಂದಿದೆ ಎಂದರೆ ಅರ್ಧ ಭಾಗ ಎಂದು ಬರೆದಿದ್ದು, ಯಾವ ಭಾಗದ ಅರ್ಧ ಎಂದು ಹೇಳಿಲ್ಲ. ದಿಃ 21.04.2019 ರಂದು ನಾನು ಮತ್ತು ನನ್ನ ಹೆಂಡತಿ ಪೋಲೀಸ್ ಠಾಣೆಗೆ ಹೋಗಿ ಪಂಚಾಯಿತಿಯಲ್ಲಿ ತೀರ್ಮಾನ ಮಾಡಿಕೊಳ್ಳುತ್ತೇವೆ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದೇವೆ ಎಂದರೆ ಸರಿ. ಆ ನಂತರ ಪಂಚಾಯಿತಿ ಸೇರಿಸಿ ಮನೆಯ ಖಾತೆಯನ್ನು ವಾದಿಯ ಹೆಸರಿಗೆ ಮಾಡಿಕೊಟ್ಟಿದ್ದೇನೆ ಎಂದರೆ, ಪಂಚಾಯಿತಿಯ ತೀರ್ಮಾನಕ್ಕೆ ಇಬ್ಬರೂ ಒಪ್ಪಿಕೊಳ್ಳಲಿಲ್ಲ. ವಾದಿ ಪಂಚಾಯಿತಿಗೆ ಖಾತೆ ಮಾಡಿಕೊಡಬೇಕೆಂದು ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಪಂಚಾಯಿತಿಯಿಂದ ನೋಟೀಸ್ ಬಂದಿಲ್ಲ. ನಾನು ಪಂಚಾಯಿತಿಯವರೊಂದಿಗೆ ಷರೀಕಾಗಿ ಖಾತೆ ಮಾಡಿಕೊಡಲು ಒಪ್ಪಿಗೆ ಸಹಿ ಬೇಕು ಎಂದು

ಹಿಂಬರಹ ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮಕ್ಕಳು ಇಲ್ಲ ಎಂದರೆ ಸರಿ. ನಾನು ಹಾಗೂ 2 ನೇ ಪ್ರತಿವಾದಿ ಸೇರಿಕೊಂಡು ಏನಾದರೂ ಮಾಡಿ ಅವರ ಗಂಡನ ಭಾಗದ ಆಸ್ತಿಯನ್ನು ಅವರಿಗೆ ಕೊಡಬಾರದು ಎಂದು ಮೊದಲಿನಿಂದಲೂ ಅವರಿಗೆ ತೊಂದರೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಅವರಿಗೆ ದಾವಾ ಸ್ವತ್ತಿನಲ್ಲಿ ನಾವು ತೊಂದರೆ ಕೊಟ್ಟಿದ್ದರಿಂದ ಅವರ ಈ ಕೇಸ್ ಹಾಕಿದ್ದಾರೆ ಎಂದರೆ ನಾವು ಯಾವುದೇ ತೊಂದರೆ ಕೊಟ್ಟಿಲ್ಲ. ನಾನು ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.